# **ಕಾರ್ಮಿಕ ನ್ಯಾಯಾಲಯ, ಮೈಸೂರು.**

**Appl**:01/2025

ಎ.ಡಬ್ಲ್ಯೂ- 1

**ದಿನಾಂಕ 30.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಜೆ.ಪಿ. ವಕೀಲರ ಪರವಾಗಿ ಶ್ರೀ ವಿ.ಎಲ್.ಪಿ ವಕೀಲರಿಂದಃ**

ನಾನು 1983 ರಲ್ಲಿ ಕೆಲಸಕ್ಕೆ ಸೇರಿರುತ್ತೇನೆ. ನಾನು ಮೊದಲು throwing ನಲ್ಲಿ 10 ವರ್ಷ ಕೆಲಸ ನಂತರ Weaving ನಲ್ಲಿ 12 ವರ್ಷ ಕೆಲಸ ಮಾಡಿರುತ್ತೇನೆ. 2006 ನೇ ಇಸವಿಯಲ್ಲಿ ವಿ.ಆರ್.ಎಸ್ ಯೋಜನೆಯನ್ನ ಸಂಸ್ಥೆಯವರು ಜಾರಿಗೆ ತಂದಿದ್ದರು ಎಂದರೆ ಸರಿ. ಆ ಪ್ರಕಾರ ನಾನು ವಿ.ಆರ್.ಎಸ್ ಯೋಜನೆಯಡಿಯಲ್ಲಿ ಅರ್ಜಿ ನೀಡಿದ್ದೇ ಎಂದರೆ ಸರಿ. ಸದರಿ ನನ್ನ ಅರ್ಜಿಯನ್ನು ಸಂಸ್ಥೆಯು ಪರಿಗಣಿಸಲಸಿಲ್ಲ ಎಂದರೆ ಸರಿ. ನಾನು ವಿ.ಆರ್.ಎಸ್ ಗೆ ಅರ್ಜಿ ಕೊಟ್ಟಗ ನನ್ನ ವಿರುದ್ಧ ಅಂತರಿಕ ವಿಚಾರಣೆ ನಡೆಯುತ್ತಿತ್ತು ಎಂದರೆ ಸರಿಯಲ್ಲ. ಆದಾದ ನಂತರ ನನ್ನನ್ನು ಕೆಲಸದಿಂದ ತೆಗೆದುಹಾಕಿದ್ದರು ಎಂದರೆ ಹೌದು. ಇದಾದ ನಂತರ ಈ ನ್ಯಾಯಾಯಾದಲ್ಲಿ IID No.107/2006 ರಲ್ಲಿ ವಾಜ್ಯವನ್ನು ದಾಖಲು ಮಾಡಿದ್ದೇ ಎಂದರೆ ಸರಿ. 01.12.2010 ರಲ್ಲಿ 3 ವೇತನ ಬಡ್ತಿಗಳನ್ನು ಕಡಿತ ಗೊಳಿಸಿ, ಹಿಂಬಾಕಿ ವೇತನ ವಿಲ್ಲದೆ ಆದೇಶ ಮಾಡಿದ್ದರು ಎಂದರೆ ಸರಿ. ಸದರಿ ಆದೇಶದಲ್ಲಿ ಆಡಳಿತ ವರ್ಗದವರು ವಿ.ಆರ್.ಎಸ್ ನ್ನು ಪರಿಗಣಿಸ ಬಹದು ಅಥವಾ ಕೆಲಸಕ್ಕೆ ಪುನರ್ ನೇಮಕ ಮಾಡಿಕೊಳ್ಳಬಹುದು ಎಂದು ತಿಳಿಸಿದ್ದರು ಎಂದರೆ ಸರಿ. ಕಾರ್ಮಿಕ ನ್ಯಾಯಾಲಯ ಮಾಡಿದ್ದ ಸದರಿ ಆದೇಶವು ಪೆಬ್ರವರಿ ತಿಂಗಳು 2011 ರಲ್ಲಿ ಜಾರಿಗೆ ಬಂದಿತ್ತು ಎಂದರೆ ಸರಿ. ಆದಾದ ನಂತರ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸದರಿ ಆದೇಶವನ್ನು ಪ್ರಶ್ನೆ ಮಾಡಿದ್ದೆ ಎಂದರೆ ಸಾಕ್ಷಿ ಮುಂದುವರೆದು ಆಡಳಿತ ವರ್ಗದವರು ನನ್ನನ್ನು ಕೆಲಸಕ್ಕೆ ಪುನರ್

ನೇಮಕ ಮಾಡಿಕೊಳ್ಳಲಿಲ್ಲ ನನಗೆ ವಿ.ಆರ್.ಎಸ್ ಕೊಟ್ಟರು ನಾನು ಅದನ್ನು ತೆಗೆದು ಕೊಳ್ಳಲಿಲ್ಲ ನಂತರ ನಾನು ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಮೆಲ್ಮವಿ ಸಲ್ಲಿಸಿರುತ್ತೇನೆ ಎನ್ನುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನನ್ನನ್ನು ಕೆಲಸಕ್ಕೆ ಪುನರ್ ನೇಮಕ ಮಾಡಿಕೋಳ್ಳಿ ಅಥವಾ ನನ್ನ ವಿ.ಆರ್.ಎಸ್ ಮನವಿಯನ್ನ ಸ್ವೀಕರಿಸಿ ಎಂದು ಪರಿಹಾರ ಕೋರಿದ್ದೆ ಎಂದರೆ ಸಾಕ್ಷಿ ನಾನು ಕೆಲಸವನ್ನು ಮಾತ್ರ ಕೇಳಿದ್ದೆ ಎನ್ನುತ್ತಾರೆ.

ನಾನು ಈ ಪ್ರಕರಣದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಮಾನ್ಯ ಉಚ್ಚ ನ್ಯಾಯಾಲವು ನಾನು ಕೇಳಿದ್ದ ಎರಡು ಪರಿಹಾರಗಳನ್ನ ವಜಾಗೊಳಿಸಿತ್ತು ಎಂದರೆ ನನಗೆ ಗೋತಿಲ್ಲ. ಸದರಿ ಆದೇಶದ ವಿರುದ್ದ ಪುನಃ ಮೇಲ್ಮವಿ ಸಲ್ಲಿಸಿದ್ದೇ ಎಂದರೆ ಸರಿ. ಅದೇ ರೀತಿ ಆಡಳಿತ ವರ್ಗದವರು ಕೂಡ W.A.No.404/2022 ನ್ನ ಸಲ್ಲಿಸಿದ್ದರು ಎಂದರೆ ಸರಿ. ನಾನು ಸಲ್ಲಿಸಿದ್ದ ರ್ಜಿಯನ್ನ ಮಾನ್ಯ ಉಚ್ಚ ನ್ಯಾಯಾಲಯ ವಜಾ ಗೊಳಿಸಿತ್ತು ಎಂದರೆ ಸರಿ ಅದೇ ರೀತಿ ಆಡಳಿತ ವರ್ಗದವರು ಸಲ್ಲಿದ್ದ ಮೇಲ್ಮವಿಯನ್ನ ಪುರಸ್ಕರಿದ್ದರು ಎಂದರೆ ಸರಿ. ನಾನು ಆದಾದ ನಂತರ 2011 ರಿಂದ 2023 ರವರೆಗೆ ಸಂಸ್ಥೆಯಲ್ಲಿ ಕೆಲಸ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಮೇಲ್ಮವಿಯಲ್ಲಿ ಆದೇಶ ಆದ ನಂತರ ನನ್ನನ್ನ ಕೆಲಸಕ್ಕೆ ತೆಗೆದುಕೊಳ್ಳಲು ಆದೇಶ ಮಾಡಿದ್ದರು ಎಂದರೆ ಸರಿ. ನಾನು ಕಲಂ 17-B ಅಡಿಯಲ್ಲ ಸಬಂಳ ವನ್ನ ಕೇಳಿಕೊಂಡು ಮಾನ್ಯ ಉಚ್ಚ ನ್ಯಾಯಾಲಯಲ್ಲಿ ಅರ್ಜಿ ಸಲ್ಲಿದ್ದಿರಾ ಎಂದರೇ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಈ ಅರ್ಜಿಯಲ್ಲಿ ಸಂಬಳ ದ ಬಾಕಿ ಹಣ, ಬೊನಸ್ ಹಾಗೂ ಗಳಿಕೆ ರಜೆ ಬಾಕಿ ಕೇಳಿರುತ್ತೇನೆ. ಸದರಿ ಹಣವನ್ನ ನನಗೆ ಕೋಡಬೇಕು ಎಂದು ಯಾವುದೇ ನ್ಯಾಯಾಲಯದಲ್ಲಿ ಆದೇಶ ವಾರಿರುವುದಿಲ್ಲ ಎಂದರೆ ನನಗೆ ಗೋತಿಲ್ಲ. ಆದೇ ರೀತಿ ನನಗೆ ಬೊನಸ್ ಹಣ ಕೊಡಬೇಕು ಎಂದು ಔದ್ಯಮಿಕ ನ್ಯಾಯಾಲಯಲ್ಲಿ ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ಅದೇ ರೀತಿ ಗಳಿಕೆ ರಜೆ ಬಾಕಿ ಹಣವನ್ನು ಕೊಡಬೇಕು ಎಂದು ಯಾವುದೇ ನ್ಯಾಯಾಲದಲ್ಲಿ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ಆ

ಬಗ್ಗೆ ಯಾವುದೇ ನ್ಯಾಯಾಲದಲ್ಲಿ ಆದೇಶ ಆಗಿರುವುದಿಲ್ಲ ಎಂದರೆ ಸರಿ. ಒಬ್ಬ ವ್ಯಕ್ತಿ ಕೆಲಸ ಮಾಡಿದ್ದ ಸಂದರ್ಭದಲ್ಲಿ ಬೋನಸ್ ಪಡೆಯಲು ಅರ್ಹನಾಗಿರುತ್ತೇನೆ ಎಂದರ ಸರಿ. ಒಬ್ಬ ವ್ಯಕ್ತಿ ತಿಂಗಳಲ್ಲಿ ನಿರಂತರವಾಗಿ 20 ದಿವಸ ಕೆಲಸ ಮಾಡಿದರೆ ಒಂದು ಗಳಿಕೆ ರಜೆ ನೀಡುತ್ತಾರೆ ಎಂದರೆ ಸರಿ. ನನಗೆ ಮಾನ್ಯ ಉಚ್ಚ ನ್ಯಾಯಾಲಯ ಆಗಲಿ ಅಥವಾ ಕಾರ್ಮಿಕ ನ್ಯಾಯಾಲಯ ಆಗಲಿ ಬಾಕಿ ಹಣ ಕೊಡಬೇಕು ಎಂದು ಎಲ್ಲೂ ಆದೇಶ ಮಾಡಿಲ್ಲ ಎಂದರೆ ಗೊತ್ತಿಲ್ಲ. ಬಾಕಿ ಹಣ ಕೊಡಬೇಕು ಎಂದು ಯಾುವುದೇ ಆದೇಶ ಮಾಡಿಲ್ಲ ಎಂದು ನನ್ನ ವಕೀಲರು ನನಗೆ ತಿಳಿಸಿದ್ದರು ಕೂಡ ನಾನು ನ್ಯಾಯಾಲಯದ ಮುದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2011 ರಲ್ಲಿ ಆದೇಶ ಆದ ನಂತರ ನನ್ನನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಹೇಳಿ ನಾನು ಆಡಳಿತ ವರ್ಗಕ್ಕೆ ನೀಡಿದ್ದ ಅರ್ಜಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ಆಗುವುದಿಲ್ಲ. ನಾನು ಆ ರೀತಿ ಯಾವುದೇ ಅರ್ಜಿಯನ್ನು ಕೊಟ್ಟಿಲ್ಲ ಆದ್ದರಿಂದ ನ್ಯಾಯಾಲಯದ ಮುಂದೆ ಸದರಿ ಅರ್ಜಿಯನ್ನು ಹಾಜರು ಪಡಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ.ಎದುರುದಾರರು ಮಾನ್ಯ ಉಚ್ಚ ನ್ಯಾಯಾಲಯ ಹಾಗು ಕಾರ್ಮಿಕ ನ್ಯಾಯಲಯದ ಆದೇಶದಂತೆ ನನಗೆ ಬರಬೇಕಾದ ಹಣವನ್ನು ಪಾವತಿ ಮಾಡಿದ್ದರು ಕೂಡ ನಾನು ಈ ಸುಳ್ಳು ಅರ್ಜಿಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ನ್ಯಾಯಾಲಯದಲ್ಲಿ ಆದೇಶ ಆಗಿಲ್ಲದೇ ಇದ್ದರೂ ಕೂಡ ಈ ಸುಳ್ಳು ಅರ್ಜಿಯನ್ನು ತಂದಿರುತೇ್ತನೆ ಎಂದರೆ ಸರಿಯಲ್ಲ. ನಾನು ಇಲ್ಲಿ ಕೋರಿರುವ ಪರಿಹಾರ ಪಡೆಯಲು ಅರ್ಹ ನಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**